

بِسْمِ اللّٰہِ الرَّحْمٰنِ الرَّحِیْم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 06-12-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುದ್. ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಇಂದು ನಾನು ಪ್ರಸ್ತಾಪಿಸಲಿರುವ ಬದರಿ ಸಹಾಬಿಯ ಹೆಸರು ಹಝ್ರತ್ ಹಿಲಾಲ್ ಬಿನ್ ಉಮಯ್ಯಾ ವಾಖಿಫೀ(ರ) ಎಂದಾಗಿದೆ. ಅವರು ಆರಂಭ ಕಾಲದಲ್ಲಿಯೇ ಇಸ್ಲಾಮ್ ಧರ್ಮ ಸ್ವೀಕರಿಸಿದವರಾಗಿದ್ದರು. ಅವರಿಗೆ ತಬೂಕ್ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಅವರು ತಬೂಕ್ ಯುದ್ಧದಲ್ಲಿ ಕಾರಣವೇನೂ ಇಲ್ಲದೆ ಭಾಗವಹಿಸದ ಮೂವರು ಸಹಾಬರಲ್ಲಿ ಒಬ್ಬರಾಗಿದ್ದರು. ಇನ್ನಿಬ್ಬರು ಸಹಾಬರ ಹೆಸರು ಕಅಬ್ ಬಿನ್ ಮಾಲಿಕ್(ರ) ಮತ್ತು ಮರಾರ ಬಿನ್ ರಬೀಅ್(ರ). ಈ ಮೂವರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಈ ವಚನ ಅವತೀರ್ಣವಾಗಿತ್ತು:

وَعَلَى الثَّلَاثَةِ الَّذِينَ خُلِّفُوا حَتَّىٰ إِذَا ضَاقَتْ عَلَيْهِمُ الْأَرْضُ بِمَا رَحُبَتْ وَضَاقَتْ عَلَيْهِمْ أَنفُسُهُمْ وَظَنُّوا أَن لَّا مَلْجَأَ مِنَ اللَّهِ إِلَّا إِلَيْهِ ثُمَّ تَابَ عَلَيْهِمْ لِيَتُوبُوا ۚ إِنَّ اللَّهَ هُوَ التَّوَّابُ الرَّحِيمُ

**ವ ಅಲಾ ಸಲಾಸತಿಲ್ಲಝೀನ ಖುಲ್ಲಿಫೂ ಹತ್ತಾ ಇದಾ. ಝಾಖತ್ ಅಲೈಹಿಮುಲ್ ಅರ್‌ಝು ಬಿಮಾ ರಹುಬತ್ ವ ಝಾಖತ್ ಅಲೈಹಿಮ್ ಅನ್‌ಫುಸುಹುಮ್ ವಝುನ್ನೂ ಅನ್‌ಲಾ ಮಲ್‌ಜಅ ಮಿನಲ್ಲಾಹಿ ಇಲ್ಲಾ ಇಲೈಹಿ ಸುಮ್ಮ ತಾಬ ಅಲೈಹಿಮ್ ಲಿಯತೂಬೂ, ಇನ್ನಲ್ಲಾಹ ಹುವತ್ತವ್ವಾಬುರ್ರಹೀಮ್.**

ಹಿಂದೆ ಉಳಿದು ಬಿಟ್ಟ ಆ ಮೂವರ ಮೇಲೂ (ಅವನು ಕರುಣೆ ತೋರಿಸಿದ್ದಾನೆ). ಭೂಮಿ ವಿಶಾಲವಾಗಿದ್ದರೂ ಅದು ಅವರಿಗೆ ಸಂಕುಚಿತಗೊಂಡು ಅವರ ಜೀವವೇ ಅವರಿಗೆ ಭಾರವೆನಿಸಿ, ಅಲ್ಲಾಹನ ಕೋಪದಿಂದ ಪಾರಾಗಲು ಅವನ ಅಭಯವನ್ನೇ ಪಡೆಯುವುದು ಹೊರತು ಬೇರೆ ಉಪಾಯವಿಲ್ಲವೆಂದು ಅವರಿಗೆ ಮನವರಿಕೆಯಾಗುವಂತೆ (ಅವರ ಸ್ಥಿತಿ) ಇತ್ತು. ಅನಂತರ ಅವರು ಪಶ್ಚಾತ್ತಾಪ ಪಡಲಿಕ್ಕಾಗಿ ಅಲ್ಲಾಹನು ಅವರೆಡೆಗೆ ಕಾರುಣ್ಯದಿಂದ ತಿರುಗಿದನು. ಖಂಡಿತವಾಗಿಯೂ ಅಲ್ಲಾಹನು ಪಶ್ಚಾತ್ತಾಪ ಸ್ವೀಕರಿಸುವವನೂ ಕಾರುಣ್ಯ ನಿಧಿಯೂ ಆಗಿದ್ದಾನೆ. (9:118).

ತಬೂಕ್ ಯುದ್ಧ ಹಿಜರಿ ವರ್ಷ 9ರಲ್ಲಿ ನಡೆಯಿತು. ಸಹೀಹ್ ಬುಖಾರಿಯ ಒಂದು ದೀರ್ಘವಾದ ವರದಿಯಲ್ಲಿ ಆ ಮೂವರು ಸಹಾಬರು ಆ ಯುದ್ಧದಲ್ಲಿ ಭಾಗವಹಿಸದ ಬಗ್ಗೆ ವಿವರಿಸಲಾಗಿದೆ. ಹಝ್ರತ್ ಕಅಬ್ ಬಿನ್ ಮಾಲಿಕರ ಮೊಮ್ಮಗ ಅಬ್ದುರ್ರಹ್ಮಾನ್ ತನ್ನ ಪಿತ ಅಬ್ದುಲ್ಲಾ ಬಿನ್ ಕಅಬ್‌ರಿಂದ ವರದಿ ಮಾಡುತ್ತಾರೆ: ಹಝ್ರತ್ ಕಅಬ್ ಬಿನ್ ಮಾಲಿಕ್ ಹೇಳಿದರು: ನಾನು ತಬೂಕ್ ಯುದ್ಧದ ಹೊರತು ಬೇರೆ ಯಾವ ಯುದ್ಧದಲ್ಲೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸದಿರಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖುರೈಶಿಗಳ ವ್ಯಾಪಾರಿ ಸಂಘವನ್ನು ತಡೆಗಟ್ಟಲು ಹೊರಟಿದ್ದರು. ಆದರೆ ಅವರು ಶತ್ರುಗಳ ಸೈನ್ಯವನ್ನು ಎದುರಿಸುವಂತೆ ಅಲ್ಲಾಹನು ಮಾಡಿದನು. ನಾನು ತಬೂಕ್ ಯುದ್ಧದಲ್ಲಿ ಭಾಗವಹಿಸಲು ಹೋಗದೆ ಇದ್ದಾಗ ನನ್ನ ಸ್ಥಿತಿ ಹಿಂದೆಂದಿಗಿಂತಲೂ ಉತ್ತಮವೇ ಆಗಿತ್ತು. ಅದರ ಮೊದಲು ನನಗೆ ಪ್ರಯಾಣ ಮಾಡಲು ಒಂಟೆಯನ್ನು ಹೊಂದಲು ಸಾಧ್ಯವಿರಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಬೂಕ್ ಯುದ್ಧಕ್ಕೋಸ್ಕರ ಕಠಿಣವಾದ ಬೇಸಗೆ ಕಾಲದಲ್ಲಿ ಹೊರಟರು. ಅವರ ಎದುರಿಗೆ ದೂರದ ಯಾತ್ರೆ, ನಿರ್ಜನ ಮರುಭೂಮಿ ಮತ್ತು ಶತ್ರುಗಳ ದೊಡ್ಡ ಸೈನ್ಯವಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರೊಂದಿಗೆ ಶತ್ರುಗಳ ಶಕ್ತಿ ಸಾಮರ್ಥ್ಯಗಳ ಬಗ್ಗೆ ಸ್ಪಷ್ಟವಾಗಿ ವಿವರಿಸಿ ಹೇಳಿ ತಕ್ಕುದಾದ ಸಿದ್ಧತೆ ನಡೆಸಲು ಹೇಳಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮತ್ತು ಮುಸ್ಲಿಮರು ಯುದ್ಧಕ್ಕೆ ಹೊರಡಲು ಸಿದ್ಧತೆಗಳನ್ನು ಪ್ರಾರಂಭಿಸಿದ್ದರು. ನಾನು ಬೆಳಿಗ್ಗೆ ಅವರ ಬಳಿಗೆ ಹೋಗುತ್ತಿದ್ದೆನು ಅವರ ಜೊತೆಗೆ ಪ್ರಯಾಣಕ್ಕೆ ಸಿದ್ಧತೆಗಳನ್ನು ಮಾಡಲು. ಆದರೆ ನಾನು ಮರಳಿ ಬಂದಾಗ ನಾನು ಏನೂ ಸಿದ್ಧತೆಗಳನ್ನು ಮಾಡಿರುತ್ತಿರಲಿಲ್ಲ. ನಾನು ಯೋಚಿಸುತ್ತಿದ್ದೆ, ನನ್ನ ಬಳಿ ಸಾಮಗ್ರಿಗಳಿವೆ ನಾನು ಸಿದ್ಧತೆಗಳನ್ನು ಮಾಡಬಲ್ಲೆ. ಈ ಯೋಚನೆಯಿಂದ ನಾನು ಉದಾಸೀನತೆ ಹೊಂದಿದೆ. ಆದರೆ ಇತರ ಜನರು ಆವಶ್ಯಕವಾದ ಸಿದ್ಧತೆಗಳನ್ನು ನಡೆಸಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ದಿನ ಪ್ರಾತಃಕಾಲ ಯುದ್ಧಕ್ಕೆ ಹೊರಟರು. ಅವರ ಜೊತೆಗೆ ಮುಸ್ಲಿಮರೂ ಹೊರಟರು. ಆದರೆ ನಾನು ಪ್ರಯಾಣಕ್ಕೆ ಯಾವುದೇ ತಯಾರಿ ನಡೆಸಿರಲಿಲ್ಲ. ನಾನು ಯೋಚಿಸಿದೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಯಾಣ ಹೊರಟ ನಂತರ ಒಂದೆರಡು ದಿನಗಳಲ್ಲಿ ಸಿದ್ಧತೆ ನಡೆಸಿ ಅವರೊಂದಿಗೆ ಸೇರಲು ಹೋಗುವೆನು. ಅನಂತರ ಸಹ ನಾನು ಸಿದ್ಧತೆ ನಡೆಸಲಿಲ್ಲ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವೇಗವಾಗಿ ಪ್ರಯಾಣಿಸಿ ಸೈನ್ಯದೊಂದಿಗೆ ಬಹಳ ದೂರ ಹೋದರೂ ನಾನು ಅದೇ ಸ್ಥಿತಿಯಲ್ಲಿದ್ದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಬೂಕ್ ತಲಪುವ ತನಕ ನನ್ನನ್ನು ನೆನಪಿಸಲಿಲ್ಲ. ಅವರು ಜನರೊಂದಿಗೆ ಕುಳಿತಾಗ ಕೇಳಿದರು: ಕಅಬ್ ಎಲ್ಲಿದ್ದಾರೆ? ಬನೂ ಸಲ್ಮಾ ಗೋತ್ರದ ಒಬ್ಬ ಹೇಳಿದ: ಯಾ ರಸೂಲುಲ್ಲಾಹ್, ಅವನ ಎರಡು ಚಾದರಗಳು ಮತ್ತು ಅವನ ಎಡ ಬಲ ನೋಡುವಿಕೆ ಅವನನ್ನು ತಡೆದಿರಿಸಿವೆ. ಹಝ್ರತ್ ಮುಆಝ್ ಬಿನ್ ಜಬಲ್ ಆ ಮಾತು ಆಲಿಸಿ

ಹೇಳಿದರು: ಕಅಬ್ ಬಗ್ಗೆ ನಮಗೆ ಚೆನ್ನಾಗಿ ತಿಳಿದಿದೆ. ಅವನಲ್ಲಿ ಅಹಂಭಾವವಾಗಲಿ ಕಾಪಟ್ಯವಾಗಲಿ ಇಲ್ಲ. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೌನವಾದರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತಬೂಕ್‌ನಿಂದ ಮರಳಿ ಬರುತ್ತಿರುವ ಸಮಾಚಾರ ದೊರಕಿದಾಗ ನನಗೆ ಚಿಂತೆ ತಲೆದೋರಿತು. ನಾನು ಸುಳ್ಳು ಹೇಳುವ ಬಗ್ಗೆ ಯೋಚಿಸಿದೆ. ಯಾವ ರೀತಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೋಪದಿಂದ ರಕ್ಷಿಸಲ್ಪಡುವೆ ಎಂದು ಯೋಚಿಸಿದೆ. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮರಳಿ ಬಂದು ತಲಪಿದಾಗ ನನ್ನ ಯೋಚನೆಗಳೆಲ್ಲಾ ಹಾರಿ ಹೋದುವು. ನಾನು ಸುಳ್ಳು ಮಾತುಗಳನ್ನು ಹೇಳುವ ಮೂಲಕ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕೋಪದಿಂದ ರಕ್ಷಣೆ ಪಡೆಯಲಾರೆ ಎಂದು ಯೋಚಿಸಿದೆ. ಆದುದರಿಂದ ನಾನು ಸತ್ಯ ಹೇಳಲು ನಿರ್ಧರಿಸಿದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮಸ್‌ಜಿದ್‌ಗೆ ಆಗಮಿಸಿದಾಗ ಯುದ್ಧಕ್ಕೆ ಹೋಗದೆ ಹಿಂದೆ ಉಳಿದವರು ಅವರ ಬಳಿಗೆ ಹೋಗಿ ಏನೆಲ್ಲಾ ನೆವನಗಳನ್ನು ಹೇಳಲು ತೊಡಗಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ನೆವನಗಳನ್ನು ಅಂಗೀಕರಿಸಿ ಅವರಿಂದ ಬೈಅತ್ ಪಡೆದು ಅವರಿಗೋಸ್ಕರ ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡಿ ಅವರ ಅಂತರಂಗವನ್ನು ಅಲ್ಲಾಹನಿಗೆ ಬಿಟ್ಟುಕೊಟ್ಟರು. ಅನಂತರ ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಹೋಗಿ ಅವರಿಗೆ ಸಲಾಮ್ ಹೇಳಿದೆ. ಅವರು ಕೋಪಗೊಂಡ ವ್ಯಕ್ತಿಯ ಹಾಗೆ ಮುಗುಳ್ನಗೆ ಸೂಸಿದರು. ಅನಂತರ ಮುಂದೆ ಬಾ ಎಂದು ಹೇಳಿದರು. ನಾನು ಮುಂದೆ ಬಂದು ಅವರ ಮುಂದೆ ಕುಳಿತೆನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಕೇಳಿದರು: ನೀನು ಹಿಂದೆ ಉಳಿಯಲು ಕಾರಣವೇನು? ನೀನು ಸವಾರಿ ಮೃಗ ಖರೀದಿಸಿರಲಿಲ್ಲವೇ? ನಾನು ಹೇಳಿದೆ: ಹೌದು ನಾನು ಖರೀದಿಸಿದ್ದೆ. ಅಲ್ಲಾಹನಾಣೆ ನಾನು ಎಂತಹ ವ್ಯಕ್ತಿ ಎಂದರೆ ತಮ್ಮ ಹೊರತು ಲೋಕದ ಬೇರೆ ಯಾರಾದರೂ ಮುಂದೆ ಕುಳಿತಿದ್ದರೆ ನಾನು ಖಂಡಿತವಾಗಿಯೂ ಯಾವುದಾದರೂ ನೆವನ ಹೇಳಿ ಅವರ ಕೋಪದಿಂದ ರಕ್ಷಣೆ ಪಡೆಯುತ್ತಿದ್ದೆ ಆದರೆ ಅಲ್ಲಾಹನಾಣೆ ನಾನು ತಮ್ಮೊಂದಿಗೆ ಏನಾದರೂ ನೆವನ ಹೇಳಿ ನೀವು ನನ್ನೊಂದಿಗೆ ಸಿಟ್ಟಾಗದಂತೆ ಮಾಡಿದರೆ, ಅಲ್ಲಾಹನು ಬೇಗನೆ ತಾವು ನನ್ನೊಂದಿಗೆ ಸಿಟ್ಟಾಗುವಂತೆ ಮಾಡುವನು. ನಾನು ತಮ್ಮೊಂದಿಗೆ ಸತ್ಯವಾದ ಮಾತು ಹೇಳಿ ತಾವು ನನ್ನ ಬಗ್ಗೆ ಸಿಟ್ಟನ್ನು ಹೊಂದಿದರೂ ನಾನು ಅಲ್ಲಾಹನಿಂದ ಕ್ಷಮೆಯನ್ನು ಪ್ರತೀಕ್ಷಿಸುತ್ತೇನೆ.

ಅನಂತರ ಹಝ್ರತ್ ಕಅಬ್ ಹೇಳಿದರು: ಅಲ್ಲಾಹನಾಣೆ ನನಗೆ ಯಾವುದೇ ನ್ಯಾಯವಾದ ಕಾರಣವಿರಲಿಲ್ಲ. ನಾನು ಯುದ್ಧಕ್ಕೆ ಹೊರಡದೆ ಇದ್ದ ಕಾಲದಲ್ಲಿ ನಾನು ಹಿಂದೆಂದಿಗಿಂತಲೂ ಹೆಚ್ಚು ಸುಖವಾಗಿ ಇದ್ದೆನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಕಅಬ್ ಸತ್ಯ ಹೇಳಿರುವನು. ಅನಂತರ ಹೇಳಿದರು: ಎದ್ದು ಹೋಗು, ನಿನ್ನ ಬಗ್ಗೆ ಅಲ್ಲಾಹನು ಯಾವುದಾದರೂ ತೀರ್ಪು ನೀಡುವ ತನಕ ಪ್ರತೀಕ್ಷಿಸು. ನಾನು ಎದ್ದು ಹೊರಟೆನು. ಬನೂ ಸಲ್ಮಾ ಗೋತ್ರದ ಕೆಲವರು ಎದ್ದು ನನ್ನನ್ನು ಹಿಂಬಾಲಿಸಿದರು. ಅವರು ನನ್ನೊಂದಿಗೆ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಏನಾದರೂ ನೆವನ ಹೇಳಲಾಗಲಿಲ್ಲವೇ? ಅವರು ನಿನಗೋಸ್ಕರ ಇಸ್ತಿಗ್‌ಫಾರ್ ಮಾಡುವಾಗ ನಿನ್ನ ಪಾಪದೋಷ ಕ್ಷಮಿಸಲ್ಪಡುತ್ತಿತ್ತು. ನಾನು ಅವರೊಂದಿಗೆ ಕೇಳಿದೆ: ನನ್ನ ಹಾಗೆ ಹೇಳಿದ ಬೇರೆ ಯಾರಾದರೂ ಇದ್ದಾರೆಯೇ? ಅವರು ಹೇಳಿದರು: ಬೇರೆ ಇಬ್ಬರಿದ್ದಾರೆ. ಅವರಿಗೆ ಸಹ ನಿನಗೆ ದೊರಕಿದ ಉತ್ತರವೇ ಲಭಿಸಿದೆ. ನಾನು ಕೇಳಿದೆ: ಅವರು ಯಾರು? ಅವರು ಹೇಳಿದರು: ಒಬ್ಬರು ಮರಾರ ಬಿನ್ ರಬೀಅ್ ಉಮರಿ ಇನ್ನೊಬ್ಬರು ಹಿಲಾಲ್ ಬಿನ್ ಉಮಯ್ಯ ವಾಖಿಫೀ. ಹಝ್ರತ್ ಕಅಬ್ ಹೇಳುತ್ತಾರೆ: ಅವರು ನನ್ನೊಂದಿಗೆ ಬದರ್ ಯುದ್ಧದಲ್ಲಿ ಭಾಗವಹಿಸಿದ ಇಬ್ಬರು ಸಾತ್ವಿಕರ ಹೆಸರು ಹೇಳಿದರು. ಅವರಿಬ್ಬರು ನನಗೆ ಮಾದರಿಯಾಗಿದ್ದರು. ಅನಂತರ ಅಲ್ಲಿಂದ ನಾನು ಹೋದೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮುಸ್ಲಿಮರನ್ನು ನಮ್ಮೊಂದಿಗೆ ಮಾತನಾಡುವುದರಿಂದ ತಡೆದರು.

ಜನರು ನಮ್ಮೊಂದಿಗೆ ನಾವು ಅವರಿಗೆ ಪರಿಚಯವಿಲ್ಲದವರೋ ಎಂಬಂತೆ ವರ್ತಿಸಲು ತೊಡಗಿದರು. ನಾನು ಒಂದು ದಿವಸ ಮದೀನದ ಪೇಟೆಯಲ್ಲಿ ಹೋಗುತ್ತಾ ಇದ್ದಾಗ ಸಿರಿಯಾ ದೇಶದ ನಬತ್‌ಗಳಲ್ಲಿ ಒಬ್ಬ ವಿಚಾರಿಸುತ್ತಿದ್ದ ಕಅಬ್ ಬಿನ್ ಮಾಲಿಕ್ ಯಾರು ಎಂದು. ಜನರು ನನ್ನ ಕಡೆಗೆ ಸಂಜ್ಞೆ ಮಾಡಿ ತೋರಿಸಿದಾಗ ಆತ ನನ್ನ ಬಳಿಗೆ ಬಂದು ಗಸ್ಸಾನ್ ದೊರೆಯ ಒಂದು ಪತ್ರ ನನಗೆ ಕೊಟ್ಟನು. ಅದರಲ್ಲಿ ಹೀಗೆ ಬರೆದಿತ್ತು, ನಿನ್ನ ಸಂಗಡಿಗರು ನಿನ್ನೊಂದಿಗೆ ಕಠಿಣವಾಗಿ ವರ್ತಿಸುತ್ತಿದ್ದಾರೆಂಬ ಸಮಾಚಾರ ನನಗೆ ಲಭಿಸಿದೆ. ನಿನ್ನನ್ನು ಬಹಿಷ್ಕರಿಸಲಾಗಿದೆ ಎಂದು ತಿಳಿಯಿತು. ನಿನ್ನನ್ನು ಅಪಮಾನ ಅನುಭವಿಸುವ ಒಂದು ಕುಟುಂಬದಲ್ಲಿ ಅಲ್ಲಾಹನು ಹುಟ್ಟಿಸಿಲ್ಲ. ನೀನು ನಾಶಗೊಳಿಸಲ್ಪಡುವವನೂ ಅಲ್ಲ. ನೀನು ನಮ್ಮ ಬಳಿಗೆ ಬಾ ನಾವು ನಿನಗೆ ಗೌರವ ನೀಡುವೆವು.

ಹಝ್ರತ್ ಕಅಬ್ ಹೇಳುತ್ತಾರೆ: ನಾನು ಈ ಪತ್ರ ಓದಿದಾಗ ಇದೊಂದು ಪರೀಕ್ಷೆ ಎಂದು ಗ್ರಹಿಸಿದೆ. ನಾನು ಆ ಪತ್ರವನ್ನು ಒಲೆಯೊಳಗೆ ಹಾಕಿ ಸುಟ್ಟುಬಿಟ್ಟೆನು. ನಿಗದಿತ 50 ರಾತ್ರಿಗಳಲ್ಲಿ 40 ರಾತ್ರಿಗಳು ದಾಟಿ ಹೋದಾಗ ನನಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಂದೇಶ ಕಳುಹಿಸಿದರು. ನೀನು ನಿನ್ನ ಪತ್ನಿಯಿಂದ ದೂರ ಸರಿ ಎಂದು. ಆಗ ನಾನು ಕೇಳಿದೆ: ನಾನು ತಲಾಖ್ ನೀಡಬೇಕೆ? ಆದರೆ ಹೀಗೆ ಉತ್ತರ ದೊರಕಿತು: ನೀನು ಬೇರೆಯಾಗಿರು. ಆಕೆಯ ಸಮೀಪ ಹೋಗಬೇಡ. ನನ್ನ ಇಬ್ಬರು ಸಂಗಡಿಗರಿಗೂ ಇದೇ ಆಜ್ಞೆ ದೊರಕಿತು. ಅನಂತರ ಹತ್ತು ದಿನಗಳು ಅದೇ ಸ್ಥಿತಿಯಲ್ಲಿ ಕಳೆಯಿತು. 50ನೇ ರಾತ್ರಿ ದಾಟಿ ಹೋಗಿ ಸುಬ್‌ಹ್ ನಮಾಝ್ ನಂತರ ನಾನು ನನ್ನ ಮನೆಯ ಛಾವಣಿಯಲ್ಲಿ ನಿಂತಿದ್ದೆನು. ಆಗ ಒಬ್ಬನು ಕೂಗಿ ಹೇಳುವುದಾಗಿ ಆಲಿಸಿದೆ. ಅವನು ಸುಲಅ್ ಬೆಟ್ಟದ ಮೇಲೇರಿ ಉಚ್ಚ ಧ್ವನಿಯಲ್ಲಿ ಹೇಳುತ್ತಿದ್ದ: ಓ ಕಅಬ್ ಬಿನ್ ಮಾಲಿಕ್ ನಿನಗೆ ಶುಭವಾರ್ತೆ ಇದೆ. ಅದನ್ನು ಕೇಳಿ ನಾನು ಸಾಷ್ಟಾಂಗ ಪ್ರಣಾಮ ಮಾಡಿದೆ ಮತ್ತು ವಿಪತ್ತು ನಿವಾರಣೆ ಆಗಿದೆ ಎಂದು ತಿಳಿದುಕೊಂಡೆ. ಫಜರ್ ನಮಾಝ್ ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು,

ಅಲ್ಲಾಹನು ದಯೆದೋರಿ ನಮ್ಮ ತಪ್ಪುಗಳನ್ನು ಕ್ಷಮಿಸಿರುವನು ಎಂದು ಹೇಳಿದ್ದರು. ಆ ಮಾತುಗಳನ್ನು ಆಲಿಸಿ ನಮಗೆ ಶುಭಾಶಯ ಕೊಡಲು ಜನರು ನಮ್ಮ ಬಳಿಗೆ ಬಂದರು. ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಹೊರಟೆನು. ಜನರು ಗುಂಪು ಗುಂಪಾಗಿ ನನ್ನ ಬಳಿಗೆ ಬಂದು ನನ್ನ ತೌಬ ಅಲ್ಲಾಹನಿಂದ ಅಂಗೀಕಾರವಾದ ಬಗ್ಗೆ ನನಗೆ ಶುಭಾಶಯ ಕೋರುತ್ತಿದ್ದರು. ಅವರು ಹೇಳುತ್ತಿದ್ದರು: ನಿನಗೆ ಶುಭವಾಗಲಿ. ಅಲ್ಲಾಹನು ನಿನ್ನ ಮೇಲೆ ದಯೆದೋರಿ ನಿನ್ನ ತೌಬವನ್ನು ಸ್ವೀಕರಿಸಿದನು.

ಹಝ್ರತ್ ಕಅಬ್ ಹೇಳುತ್ತಾರೆ: ನಾನು ಮಸ್ಜಿದ್‌ಗೆ ತಲಪಿದಾಗ ಅಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕುಳಿತಿದ್ದರು. ಅವರ ಸುತ್ತುಮುತ್ತಲೂ ಜನರಿದ್ದರು. ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾ ನನ್ನನ್ನು ನೋಡಿದ ಕೂಡಲೇ ನನ್ನ ಬಳಿಗೆ ಓಡಿ ಬಂದರು. ನನಗೆ ಹಸ್ತದಾನ ನೀಡಿ ನನಗೆ ಶುಭಾಶಯ ಕೋರಿದರು. ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಸ್ಸಲಾಮು ಅಲೈಕುಮ್ ಹೇಳಿದಾಗ ಅವರು ಉತ್ತರ ನೀಡಿದರು. ಅವರ ಮುಖ ಚಹರೆ ಸಂತೋಷಭರಿತವಾಗಿ ಹೊಳೆಯುತ್ತಿತ್ತು. ಅವರು ಹೇಳಿದರು: ನಿಮಗೆ ಅತ್ಯಂತ ಒಳ್ಳೆಯ ದಿನದ ಶುಭಾವಾರ್ತೆ. ನೀವು ಜನಿಸಿದ ದಿನದ ಮೊದಲುಗೊಂಡು ಇಂದಿನ ತನಕದ ದಿನಗಳಲ್ಲಿ ಅತ್ಯಂತ ಶುಭದಿನ ಈ ದಿನವಾಗಿದೆ. ನಾನು ಕೇಳಿದೆ: ಯಾ ರಸೂಲುಲ್ಲಾಹ್, ಈ ಶುಭವಾರ್ತೆ ತಮ್ಮ ಪರವಾಗಿಯೋ ಅಥವಾ ಅಲ್ಲಾಹನಿಂದ ದೊರೆತದ್ದೋ? ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಇದು ಅಲ್ಲಾಹನಿಂದ ದೊರೆತ ಶುಭವಾರ್ತೆ ಆಗಿದೆ.

ಹಝ್ರತ್ ಕಅಬ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಂತೋಷಗೊಂಡಾಗ ಅವರ ಮುಖ ಹೇಗೆ ಪ್ರಕಾಶಿಸುತ್ತಿತ್ತೆಂದರೆ ಅದು ಚಂದ್ರನ ತುಂಡು ಎಂಬಂತೆ. ಆ ಮೂಲಕ ನಾವು ಅವರ ಸಂತೋಷವನ್ನು ಮನವರಿಕೆ ಮಾಡಿಕೊಳ್ಳುತ್ತಿದ್ದೆವು. ನಾನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಕುಳಿತಾಗ ನಾನು ಹೇಳಿದೆ: ನನ್ನ ತೌಬ ಅಲ್ಲಾಹನಿಂದ ಅಂಗೀಕಾರ ಪಡೆದ ಕಾರಣದಿಂದ ನಾನು ನನ್ನ ಭೂ ಸ್ವತ್ತುಗಳನ್ನೆಲ್ಲಾ ಅಲ್ಲಾಹನಿಗೆ ಮತ್ತು ಅವನ ರಸೂಲರಿಗೆ ಸದಖವಾಗಿ ಕೊಡುತ್ತೇನೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಿನ್ನ ಭೂ ಸ್ವತ್ತುಗಳಲ್ಲಿ ನಿನಗೋಸ್ಕರ ಸಹ ಒಂದು ಭಾಗವನ್ನು ಇರಿಸು. ಅದು ನಿನಗೆ ಉತ್ತಮವಾಗಿದೆ. ಆಗ ನಾನು ಹೇಳಿದೆ: ಖೈಬರ್‌ನಲ್ಲಿರುವ ನನ್ನ ಆಸ್ತಿಯನ್ನು ನಾನು ನನಗೋಸ್ಕರ ಇರಿಸುತ್ತೇನೆ. ಓ ಅಲ್ಲಾಹನ ರಸೂಲರೇ, ನನ್ನ ಸತ್ಯಸಂಧತೆಯ ಕಾರಣದಿಂದ ಅಲ್ಲಾಹನು ನನ್ನನ್ನು ರಕ್ಷಿಸಿದನು. ನಾನು ಯಾವಾಗಲೂ ಸತ್ಯವನ್ನೇ ಹೇಳುವೆನು ನಾನು ಜೀವಿಸಿರುವ ತನಕ ಎಂದು ನನ್ನ ತೌಬದಲ್ಲಿ ಪ್ರಾರ್ಥಿಸಿದ್ದೇನೆ.

ತಬೂಕ್ ಯುದ್ಧಕ್ಕೋಸ್ಕರ ಸಿದ್ಧತೆ ನಡೆಸಲು ಕಾರಣವಾದುದೇನೆಂದರೆ, ಸಿರಿಯದ ನಿಬ್ತಿ ಗೋತ್ರದ ಜನರು ತೈಲ ವ್ಯಾಪಾರಕ್ಕೋಸ್ಕರ ಮದೀನಕ್ಕೆ ಅಗಮಿಸುತ್ತಿದ್ದರು. ಅವರ ಮೂಲಕ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ರೋಮಿನ ಖೈಸರನ ಒಂದು ದೊಡ್ಡ ಸೈನ್ಯ ಸಿರಿಯದಲ್ಲಿ ಜಮಾಯಿಸಿದೆ ಎಂಬ ವಿವರ ಲಭಿಸಿತು. ಅವರೊಂದಿಗೆ ಖೈಸರೂ ಇದ್ದಾನೆ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಈ ಸಮಾಚಾರ ತಲಪಿದಾಗ ಮುಸ್ಲಿಮರಲ್ಲಿ ಸಾಕಷ್ಟು ಶಕ್ತಿ ಇರಲಿಲ್ಲವಾದರೂ ಅವರನ್ನು ಯುದ್ಧಕ್ಕೆ ಹೊರಡಲು ಸಿದ್ಧರಾಗಲು ಹೇಳಿದರು. ಯಾವ ಕಡೆಗೆ ಎಲ್ಲಿಗೆ ಹೋಗಬೇಕೆಂದು ಹೇಳಿ ಮುಸ್ಲಿಮರನ್ನು ಅದಕ್ಕಾಗಿ ಸಿದ್ಧರಾಗಲು ಹೇಳಿದರು. ಸಹಾಬರು ಬಲಿದಾನ ನೀಡಲು ಮುಂದಕ್ಕೆ ಬಂದರು. ಜನರು ತಮ್ಮ ಮನೆಯ ಸಾಮಗ್ರಿಗಳನ್ನು ಒಗ್ಗೂಡಿಸಿ ಯುದ್ಧಕ್ಕೆ ಸಿದ್ಧರಾದರು. ಕೆಲವರು ಬರಿಗಾಲಲ್ಲಿ ಯುದ್ಧ ಮಾಡಲು ಹೊರಟರು. ಹಝ್ರತ್ ಉಮರ್(ರ) ತನ್ನ ಸಂಪತ್ತಿನ ಅರ್ಧಭಾಗ ನೀಡಿದರು. ಹಝ್ರತ್ ಅಬೂಬಕರ್(ರ) ತನ್ನ ಮನೆಯಲ್ಲಿದ್ದ ಎಲ್ಲವನ್ನೂ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನೀಡಿದರು. ಹಝ್ರತ್ ಅಬೂಬಕರ್ ತಬೂಕ್ ಯುದ್ಧಕ್ಕೋಸ್ಕರ ನೀಡಿದ ಸಾಮಗ್ರಿಗಳ ಮೌಲ್ಯ ನಾಲ್ಕು ಸಾವಿರ ದಿರ್‌ಹಮ್ ಆಗಿತ್ತು. ಹಝ್ರತ್ ಉಸ್ಮಾನ್ ಒಂಟೆಗಳನ್ನೂ ಕುದುರೆಗಳನ್ನೂ ನಗದು ಹಣವನ್ನೂ ನೀಡಿದರು. ಈ ತ್ಯಾಗಗಳ ಬಗ್ಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮಿಂಬರ್‌ನಲ್ಲಿ ನಿಂತು ಹೇಳಿದರು: ಈ ಕರ್ಮದ ನಂತರ ಉಸ್ಮಾನರ ಯಾವುದೇ ಕರ್ಮದ ಕಾರಣ ಅವರು ಶಿಕ್ಷಿಸಲ್ಪಡಲಾರರು ಎಂದು.

ಹಝ್ರತ್ ಅಬೂ ಉಖೈಲ್ ಎಂಬ ಒಬ್ಬ ಸಹಾಬಿಯ ಕೈಯಲ್ಲಿ ಯುದ್ಧಕ್ಕೋಸ್ಕರ ನೀಡಲು ಏನೂ ಇರಲಿಲ್ಲ. ಅವರು ಒಬ್ಬ ವ್ಯಕ್ತಿಯ ಹೊಲಕ್ಕೆ ರಾತ್ರಿ ಹೊತ್ತು ನೀರು ಹಾಯಿಸುವ ಗುತ್ತಿಗೆ ಪಡೆದು ರಾತ್ರಿ ಇಡೀ ಬಾವಿಯಿಂದ ನೀರು ಸೇದಿ ಹೊಲಕ್ಕೆ ಹಾಯಿಸಿದರು. ಅದಕ್ಕೋಸ್ಕರ ಅವರಿಗೆ ಎರಡು ಸಾಅ್ ಎಂದರೆ ಅಂದಾಜು ನಾಲ್ಕೈದು ಕಿಲೋ ಖರ್ಜೂರ ದೊರಕಿತು. ಅದರಲ್ಲಿ ಅರ್ಧಾಂಶ ತನ್ನ ಪತ್ನಿಗೂ ಮಕ್ಕಳಿಗೂ ಕೊಟ್ಟು ಉಳಿದ ಅರ್ಧಾಂಶವನ್ನು ಅಲ್ಲಾಹನ ಮಾರ್ಗದಲ್ಲಿ ಬಲಿದಾನ ನೀಡಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಬಂದರು. ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ತನ್ನ ಸಂಪತ್ತಿನ ಅರ್ಧಾಂಶ ನೀಡಿದರು. ಅದರ ಮೌಲ್ಯ ನಾಲ್ಕು ಸಾವಿರದ ನಾನೂರು ದಿರ್‌ಹಮ್ ಆಗಿತ್ತು. ಹಝ್ರತ್ ಆಸಿಮ್ ಬಿನ್ ಅದೀ ನೂರು ವಸಖ್ ಖರ್ಜೂರ ನೀಡಿದರು.

ಕಪಟ ವಿಶ್ವಾಸಿಗಳು ಇವುಗಳು ತೋರಿಕೆಗಾಗಿ ಮಾಡುವ ಕೃತ್ಯಗಳೆಂದು ಆಕ್ಷೇಪಿಸಿದರು. ಆಗ ಅಲ್ಲಾಹನು ಈ ವಚನವನ್ನು ಅವತೀರ್ಣ ಗೊಳಿಸಿದನು:

الَّذِينَ يَلْمِزُونَ الْمُطَّوِّعِينَ مِنَ الْمُؤْمِنِينَ فِي الصَّدَقَاتِ وَالَّذِينَ لَا يَجِدُونَ إِلَّا جُهْدَهُمْ فَيَسْخَرُونَ مِنْهُمْ ۙ سَخِرَ اللَّهُ مِنْهُمْ وَلَهُمْ عَذَابٌ أَلِيمٌ

**ಅಲ್ಲಝೀನ ಯಲ್‌ಮಿಝೂನಲ್ ಮುತ್ತವ್ವಿಈನ ಮಿನಲ್ ಮುಅ್‌ಮಿನೀನ ಫಿಸ್ಸದಖಾತಿ ವಲ್ಲಝೀನ ಲಾ ಯಜಿದೂನ ಇಲ್ಲಾ ಜುಹ್‌ದಹುಮ್ ಫಯಸ್‌ಖರೂನ ಮಿನ್‌ಹುಮ್, ಸಖಿರಲ್ಲಾಹು ಮಿನ್‌ಹುಮ್ ವಲಹುಮ್ ಅಝಾಬುನ್ ಅಲೀಮ್.**

ಸತ್ಯ ವಿಶ್ವಾಸಿಗಳಲ್ಲಿ ಸ್ವಂತ ಇಷ್ಟದಿಂದ ದಾನಧರ್ಮ ಮಾಡುವವರನ್ನು ಮತ್ತು ತಮ್ಮ ಕಠಿಣ ಪರಿಶ್ರಮ ಹೊರತು

ಬೇರೇನನ್ನೂ ದಾನ ಮಾಡಲು ಅಶಕ್ತರಾದವರನ್ನು ಆಕ್ಷೇಪಿಸುವವರು ಅವರಾಗಿದ್ದಾರೆ. ಹಾಗೆ ಅವರು (ಆ ಕಪಟ ವಿಶ್ವಾಸಿಗಳು) ಇವರನ್ನು ಅಪಹಾಸ್ಯ ಮಾಡುತ್ತಾರೆ. ಅಲ್ಲಾಹನು ಅವರ ಪರಿಹಾಸಕ್ಕೆ ತಕ್ಕ ಪ್ರತಿಫಲವನ್ನು ಕೊಡುವನು. ಅವರಿಗೆ ಯಾತನಾಮಯವಾದ ಶಿಕ್ಷೆ ಇದೆ. (9:79).

ಹಝ್ರತ್ ಹಿಲಾಲ್ ಬಿನ್ ಉಮಯ್ಯರ ಬಗ್ಗೆ ಇನ್ನೂ ವಿವರಿಸಲಿಕ್ಕಿದೆ. ಇನ್‌ಶಾಅಲ್ಲಾಹ್ ಮುಂದೆ ವಿವರಿಸುವೆನು.

ಈಗ ಒಂದು ಪ್ರಕಟಣೆ ಇದೆ. ಶುಅಬ ವಕ್ಫೇ ನೌ ವಿಭಾಗದ ವತಿಯಿಂದ. ಅವರು ವಕ್ಫೇ ನೌ ಬಗ್ಗೆ ಒಂದು ವೆಬ್‌ಸೈಟ್ ರೂಪಿಸಿದ್ದಾರೆ. www.waqfenauintl.org. ಇನ್‌ಶಾಅಲ್ಲಾಹ್ ಇಂದು ಅದನ್ನು ಜಾರಿಗೊಳಿಸಲಾಗುವುದು. ಇಂದಿನಿಂದ ಇದು ಪ್ರಾರಂಭವಾಗುವುದು – ಇನ್‌ಶಾಅಲ್ಲಾಹ್. ವಾಕಿಫೀನ್ ಮತ್ತು ಅವರ ತಂದೆ ತಾಯಂದಿರು ಇದರ ಉಪಯೋಗವನ್ನು ಆವಶ್ಯಕವಾಗಿ ಪಡೆಯಬೇಕು.

—————————*****—————————

اَلْحَمْدُ لِلّٰهِ نَحمَدُهُ وَ نَسْتَعِيْنُهُ وَ نَسْتَغْفِرُهُ وَنُوْمِنُ بِهِ وَنَتَوَكَّلُ
عَلَيْهِ وَنَعُوْذُ بِاللهِ مِنْ شُرُوْرِ اَنْفُسِنَا وَ مِنْ سَيِّئَاتِ اَعْمَالِنَا مَنْ
يَّهْدِهِ اللهُ فَلَا مُضِلَّ لَهُ وَمَنْ يُضْلِلْهُ فَلَا هَادِىَ لَهُ - وَنَشْهَدُ اَنْ لَّا
اِلٰهَ اِلَّا اللهُ وَنَشْهَدُ اَنَّ مُحَمَّدًا عَبْدُهُ وَرَسُوْلُهُ- عِبَادَاللهِ رَحِمَكُمُ
اللهُ اِنَّ اللهَ يَاْمُرُ بِالْعَدْلِ وَ الْاِحْسَانِ وَ اِيْتَاءِذِى الْقُرْبٰى وَيَنْهٰى
عَنِ الْفَحْشَاءِ وَ الْمُنْكَرِ وَ الْبَغْيِ يَعِظُكُمْ لَعَلَّكُمْ تَذَكَّرُوْنَ
اُذْكُرُوْا اللهَ يَذْكُرْكُمْ وَ ادْعُوْهُ يَسْتَجِبْ لَكُمْ وَلَذِكْرُ اللهِ اَكْبَرْ-

***Friday Sermon delivered by Hadrath Khaleefatul Masih Al Khamis***(atba)
*At, Masjid Mubarak, Islamabad, Tilford, UK, On 06-12-2019*
**Summarized by** *Majlis Ansarullah Bharat*
***Kannada Translation***: M. Ubeidullah for Kannada Desk, Qadian
***Reviewed by***: M.P Ibrahim |***Typing***: U Basheer Ahmad
***Published By***: Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon